ಉಪಾಧ್ಯಕ್ಷಿಣಿಯವರು:– ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು .....

(ಮಾನ್ಯ ಬಿಜೆಪಿಯ ಸದಸ್ಯರುಗಳು ಮತ್ತು ಶ್ರೀ ವಾಟಾಳ್‌ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಆರ್.ವಿ. ದೇಶಪಾಂಡೆ:– ನಮ್ಮ ಬಗ್ಗೆ ಏನಾದರೂ ಆಪಾದನೆಗಳು ಇದ್ದರೆ ಅದನ್ನು ಹೇಳಬೇಕು. ಇವರು ಏನು ಮಾಡಿದ್ದಾರೆ ? ....

(ಗೊಂದಲ)

ಉಪಾಧ್ಯಕ್ಷಿಣಿಯವರು:– ದಯಮಾಡಿ ತಾವುಗಳು ಎಲ್ಲರೂ ಶಾಂತವಾಗಿ ಇರಬೇಕು. I think it is better. ನಮ್ಮ ಹಿರಿಯ ನಾಯಕರು ಒಂದು ಪ್ರಶ್ನೆಯನ್ನು ಕೇಳುತ್ತಾ ಇದ್ದಾರೆ.

(ಗೊಂದಲ)

ಉಪಾಧ್ಯಕ್ಷಿಣಿಯವರು :– ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ನಮ್ಮ ಪಾರ್ಲಿಮೆಂಟರಿ ಅಫೇರ್ಸ್ ಸಚಿವರು ಏನೋ ಹೇಳುತ್ತಾರೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಪ್ರಶ್ನೋತ್ತರ ಕಾಲದಲ್ಲಿ ಸಂಬಂಧಪಟ್ಟಂಥ ಇಲಾಖೆಯಿಂದ ಇನ್‌ಫರ್ಮೇಶನ್ಸ್ ತೆಗೆದುಕೊಳ್ಳುವುದು ಮುಖ್ಯವಾದಂಥ ಕೆಲಸ. This cannot be converted into an argument this way or that way. ಹಾಗೆಯೇ ಮಾನ್ಯ ಸಭಾಧ್ಯಕ್ಷಿಣಿಯವರು ಬೇರೆ ಪ್ರಶ್ನೆಯನ್ನು ಕೂಡ ಕರೆದಿದ್ದಾರೆ. ಆದ್ದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವಂಥ ವಿಷಯ ಗಂಭೀರವಾದಂಥ ವಿಷಯವೇ ಆಗಿದೆ. ನಮ್ಮ ರಾಜ್ಯದ ಆಡಳಿತಕ್ಕೆ ಸಂಬಂಧಪಟ್ಟಂಥ ಪ್ರಶ್ನೆಗಳನ್ನು ಹಾಕಿ ಉತ್ತರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಈಗ ಈ ವಿಷಯಕ್ಕೆ ಸಂಬಂಧಪಟ್ಟಂಥ ಇನ್‌ಫರ್ಮೇಶನನ್ನು ಕೆ.ಎಸ್.ಆರ್.ಟಿ.ಸಿ.ಯವರು ಕೊಟ್ಟಿದ್ದಾರೆ. ಅದರ ಹಿನ್ನೆಲೆಯ ಬಗ್ಗೆ ಅವರು ಏನೂ ಮಾಡಲಾರರು. ಆದ್ದರಿಂದ ಮುಂದಿನ ಪ್ರಶ್ನೆಗಳನ್ನು ತೆಗೆದುಕೊಂಡು ಕಾರ್ಯಕಲಾಪಗಳನ್ನು ನಡೆಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(Interruption)

SRI R.V. DESHPANDE:– I am charging the Minister. He is lieing. He is not having the addresses.

MADAM DEPUTY SPEAKER:– You cannot insist on like that. He has said that he will forward it to me.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ:–ಮಾನ್ಯ ಖಂಡ್ರೆಯವರೇ ದಯವಿಟ್ಟು ಓದಿ ಹೇಳಿ, ಅವರಿಗೇನು ತಾಯಿ ಇದ್ದಾರೋ ತಂದೆ ಇದ್ದಾರೋ, ಮನೆ ಇದೆಯೋ, ಮಠ ಇದೆಯೋ ಓದಿ ಹೇಳಿ ?

ಶ್ರೀ ಭೀಮಣ್ಣ ಖಂಡ್ರೆ:– ನಾನು ಅಧ್ಯಕ್ಷರ ಹತ್ತಿರ ಕಾಗದ ಕಳಿಸಿಕೊಡ್ತಿದ್ದೇನೆ, ನೀವು ಅಲ್ಲಿ ನೋಡಿಕೊಳ್ಳಿ.

(ಗೊಂದಲ)

ಉಪಾಧ್ಯಕ್ಷಿಣಿಯವರು :– ಕೇಳೋಣ, ಶ್ರೀಯುತ ರಂಗನಾಥ್‌ರವರು ಏನೋ ಹೇಳ್ತಾರೆ.